10.1 ಪೂರ್ವಭಾವಿ ಪರೀಕ್ಷೆ:-

| |
|---|
| ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ( 9ನೇ ತಿದ್ದುಪಡಿ) ನಿಯಮಗಳು, 2011 ರಂತೆ ಪೂರ್ವಭಾವಿ ಪರೀಕ್ಷೆಯು ವಸ್ತುನಿಷ್ಠ (ಬಹು ಆಯ್ಕೆ) ಮಾದರಿಯ ಎರಡು ಪತ್ರಿಕೆಗಳನ್ನು ಒಳಗೊಂಡಿರುತ್ತದೆ. "As per Karnataka Recruitment of Gazetted Probationers (Appointment by Competitive Examinations) (9th Amendment) Rules, 2011 (A) Preliminary Examination - The Preliminary Examination shall consist of two papers of objective type (multiple choice) " |

| | |
|---|---|
| (i) ಪ್ರತಿ ಪ್ರಶ್ನೆಗೆ ಎರಡು ಅಂಕಗಳಂತೆ ಪ್ರತಿ ಪತ್ರಿಕೆಯು 100 ಪ್ರಶ್ನೆಗಳನ್ನೊಳಗೊಂಡಿರುತ್ತದೆ | (i) each paper carrying 100 questions with each question carrying two marks; and |
| (ii)) ಪ್ರತಿ ಪತ್ರಿಕೆಯು ಗರಿಷ್ಠ 200 ಅಂಕಗಳು ಮತ್ತು ಎರಡು ಗಂಟೆಗಳ ಕಾಲಾವಧಿಯದ್ದಾಗಿದ್ದು (ಎರಡು ಪತ್ರಿಕೆಗಳಿಗೆ ಒಟ್ಟು 400 ಅಂಕಗಳು) ವಿವರ ಈ ಕೆಳಕಂಡಂತಿರುತ್ತದೆ:- | (ii) each paper shall be of a maximum of 200 marks and of a duration of two hours (Total for two papers 400 marks) in the following description, namely; |

| ಕ್ರ.ಸಂ. Sl.No. | ವಿಷಯ / Subject Area | ಪ್ರಶ್ನೆಗಳ ಸಂಖ್ಯೆ/ No. of questions | ಅಂಕಗಳು/ Marks |
|---|---|---|---|
| | ಪತ್ರಿಕೆ -1 | | |
| 01 | ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಾಮುಖ್ಯತೆಯ ವಿಷಯಗಳನ್ನು ಒಳಗೊಂಡಂತೆ ಸಾಮಾನ್ಯ ಅಧ್ಯಯನ/ General studies related to National and International importance | 40 | 80 |
| 02 | ಮಾನವಿಕ ಶಾಸ್ತ್ರ / Humanities | 60 | 120 |
| | ಒಟ್ಟು | 100 | 200 |
| | ಪತ್ರಿಕೆ -2 | | |
| 01 | ರಾಜ್ಯದ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ ಸಾಮಾನ್ಯ ಅಧ್ಯಯನ /General studies related to State importance | 40 | 80 |
| 02 | ಸಾಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಪರಿಸರ ವಿಜ್ಞಾನ /General Science & Technology Environment & Ecology | 30 | 60 |
| 03 | ಸಾಮಾನ್ಯ ಮನೋಸಾಮರ್ಥ್ಯ/ General Mental Ability | 30 | 60 |
| | ಒಟ್ಟು | 100 | 200 |

| | |
|---|---|
| ಟಿಪ್ಪಣಿ:-<br>(ಅ) ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ಇರುತ್ತದೆ. | Note:<br>(a) The question paper shall be set both in Kannada and English. |
| (ಆ) ಪೂರ್ವಭಾವಿ ಪರೀಕ್ಷೆಯಲ್ಲಿನ ಸಾಮಾನ್ಯ ಮನೋ (ಬೌದ್ಧಿಕ) ಸಾಮರ್ಥ್ಯದ ಪ್ರಶ್ನೆಗಳ ಮಟ್ಟವು ಎಸ್‌ಎಸ್‌ಎಲ್‌ಸಿ/10ನೇತರಗತಿಯ ಮಟ್ಟದ್ದಾಗಿರುತ್ತದೆ ಮತ್ತುಉಳಿದ ಪತ್ರಿಕೆಗಳು ಪದವಿ ಮಟ್ಟದ್ದಾಗಿರುತ್ತವೆ | (b) The standard of General Mental Ability questions of preliminary examination (aptitude test) shall be that of X standard /SSLC level and the remaining papers are of Degree Level. |
| (ಇ) ಪ್ರಕಟಿತ ರಿಕ್ತ ಸ್ಥಾನಗಳಿಗೆ ಅನುಗುಣವಾಗಿ 1:20 ಅನುಪಾತದಲ್ಲಿ ಜಾರಿಯಲ್ಲಿರುವ ಮೀಸಲಾತಿ ನೀತಿಯನ್ವಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳು ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ ಸಾಕಷ್ಟು ಅಭ್ಯರ್ಥಿಗಳನ್ನು ಅದೇ ಅನುಪಾತದಲ್ಲಿ ಪೂರ್ವಭಾವಿ ಪರೀಕ್ಷೆಯಲ್ಲಿ ಅವರು ಗಳಿಸಿದ ಒಟ್ಟು ಅಂಕಗಳ ಆಧಾರದ ಮೇಲೆ ಮುಖ್ಯ ಪರೀಕ್ಷೆಗೆ ಪ್ರವೇಶ ನೀಡಲಾಗುತ್ತದೆ. | (c) The number of candidates to be admitted to the main examination shall be 20 times the vacancies notified for recruitment in the order of merit on the basis of the performance in the preliminary examination subject to accommodating the same ratio in adequate number of candidates belonging to the categories of Scheduled Caste, Scheduled Tribe, each of the other Backward Classes and others. |
| ಋಣಾತ್ಮಕ ಮೌಲ್ಯಮಾಪನ:- ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) (10ನೇ ತಿದ್ದುಪಡಿ) ನಿಯಮಗಳು 2013 ರಂತೆ<br>(ಡಿ) ಋಣಾತ್ಮಕ ಮೌಲ್ಯಮಾಪನ ಒಳಗೊಂಡ ಕೆಲವೊಂದು ಪ್ರಶ್ನೆಗಳಿಗೆ, ಅಂದರೆ, ಅತಿ ಸೂಕ್ತವಾದ ಉತ್ತರಕ್ಕೆ ಹಾಗೂ ಸೂಕ್ತವಲ್ಲದ ಉತ್ತರಕ್ಕೆ ಬೇರೆ ಬೇರೆ ಅಂಕಗಳನ್ನು ನೀಡಲಾಗುತ್ತಿರುವ ಪ್ರಶ್ನೆಗಳನ್ನು ಹೊರತುಪಡಿಸಿ ಎಲ್ಲಾ ತಪ್ಪು ಉತ್ತರಗಳಿಗೆ ಋಣಾತ್ಮಕ ಮೌಲ್ಯಮಾಪನ (ಕೆಳಗೆವಿವರಿಸಿದಂತೆ) ಇರುತ್ತದೆ:-<br>(i) ಪ್ರತಿಯೊಂದು ಪ್ರಶ್ನೆಗೂ 04 ಪರ್ಯಾಯ ಉತ್ತರಗಳಿದ್ದು, ಅಭ್ಯರ್ಥಿಯು ತಪ್ಪು ಉತ್ತರ ನೀಡಿರುವ ಪ್ರತಿಯೊಂದು ಪ್ರಶ್ನೆಗೆ ನಿಗದಿಪಡಿಸಿದ ಅಂಕಗಳ 0.25 ರಷ್ಟು ಅಂಕಗಳನ್ನು (¼ ರಷ್ಟು) ಅಂಕಗಳನ್ನು ಕಳೆಯಲಾಗುವುದು. | Negative Evaluation: As per Karnataka Recruitment of Gazetted Probationers (Appointment by Competitive Examinations) (10th Amendment) Rules, 2013<br>" (d) There shall be negative marking for incorrect answers (as detailed below) for all questions except some of the questions where the negative marking shall be inbuilt in the form of different marks being awarded to the most appropriate and not so appropriate answer for such questions, namely:- |
| (ii)ಅಭ್ಯರ್ಥಿಯು ಒಂದೇ ಪ್ರಶ್ನೆಗೆ ಒಂದಕ್ಕಿಂತ ಹೆಚ್ಚಿನ ಉತ್ತರಗಳನ್ನು ನಮೂದಿಸಿದ್ದು ಹಾಗೂ ಅದರಲ್ಲಿ ನಮೂದಿಸಿರುವ ಒಂದು ಉತ್ತರವು ಸರಿಯಾಗಿದ್ದರೂ ಸಹ ಅದನ್ನು ತಪ್ಪು ಉತ್ತರವೆಂದು ಪರಿಗಣಿಸಿ ಮೇಲ್ಕಂಡ(i) ರಂತೆ | (i) There are four alternative answers to every question. For each question, of which a wrong answer has been given by the candidate, one-fourth (0.25) of the marks |

| | |
|---|---|
| ಅಂಕಗಳನ್ನು ಕಳೆಯಲಾಗುವುದು.<br>(iii) ಅಭ್ಯರ್ಥಿಯು ಯಾವುದೇ ಪ್ರಶ್ನೆಯನ್ನು ಖಾಲಿ ಬಿಟ್ಟಿದ್ದಲ್ಲಿ , ಅಂದರೆ ಯಾವುದೇ ಉತ್ತರ ನೀಡದಿದ್ದಲ್ಲಿ, ಅಂತಹ ಪ್ರಶ್ನೆಗೆ ಋಣಾತ್ಮಕ ಅಂಕಗಳನ್ನ ಕಳೆಯಲಾಗುವುದಿಲ್ಲ. | assigned to that question shall be deducted as penalty;<br>(ii) If a candidate gives more than one answer to a question, it shall be treated as a wrong answer even if one of the given answers happen to be correct and there shall be same penalty in accordance with clause (i);<br>(iii) If a question is left blank i.e. no answer is given by the candidate, there shall be no penalty for that question. ” |

10.2 ಪರೀಕ್ಷೆಯ ಪಠ್ಯಕ್ರಮ

| ಪೂರ್ವಭಾವಿ ಪರೀಕ್ಷೆ: (ವಸ್ತುನಿಷ್ಠ ಮಾದರಿ)<br>ಪತ್ರಿಕೆ-1 | PRELIMINARY EXAMINATION (objective type):<br>PAPER – I |
|---|---|
| (i) ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ಪ್ರಚಲಿತ ವಿದ್ಯಮಾನಗಳು.<br>(ii) ಮಾನವಿಕ ಶಾಸ್ತ್ರ -ಭಾರತದ ಇತಿಹಾಸ- ಕರ್ನಾಟಕವನ್ನು ಪ್ರಾಮುಖ್ಯವಾಗಿರಿಸಿಕೊಂಡು ಭಾರತದ ರಾಷ್ಟ್ರೀಯ ಚಳುವಳಿಗೆ ಹೆಚ್ಚಿನ ಗಮನ ನೀಡಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ಇತಿಹಾಸ ವಿಷಯದ ಬಗ್ಗೆ ಅಭ್ಯರ್ಥಿಯ ವಿಸ್ತಾರವಾದ ಸಾಮಾನ್ಯ ತಿಳುವಳಿಕೆ.<br>(iii) ಕರ್ನಾಟಕದ ಬಗ್ಗೆ ಹೆಚ್ಚಿನ ಗಮನ ನೀಡುವುದರೊಂದಿಗೆ ಜಾಗತಿಕ ಭೂಗೋಳ ಶಾಸ್ತ್ರ ಮತ್ತು ಭಾರತದ ಭೂಗೋಳ ಶಾಸ್ತ್ರ.<br>(iv) ದೇಶದ ರಾಜಕೀಯ ವ್ಯವಸ್ಥೆ, ಗ್ರಾಮೀಣಾಭಿವೃದ್ಧಿ, ಭಾರತದ ನಿರಂತರ ಅಭಿವೃದ್ಧಿಗೆ ಯೋಜನೆ ಮತ್ತು ಆರ್ಥಿಕ ಸುಧಾರಣೆಗಳು, ಬಡತನ ನಿರ್ಮೂಲನೆ, ಜನಸಂಖ್ಯಾಶಾಸ್ತ್ರ, ಸಾಮಾಜಿಕ ಬದಲಾವಣೆಗಳನ್ನು ಒಳಗೊಂಡಂತೆ ಭಾರತದ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆ. | (i) Current events of National and International importance.<br>(ii) Humanities – History of India – Emphasis shall be on broad general understanding of the subject in itssocial, economic, cultural and political aspects with a focus on Indian national movement with special emphasis on Karnataka.<br>(iii) World Geography and Geography of India with a focus on Karnataka.<br>(iv) Indian polity and economy, including the country's political system, rural development, planning and economic reforms in India-sustainable development, poverty alleviation, demographics, social sector initiatives etc., |

| ಪತ್ರಿಕೆ-2 | PAPER – II |
|---|---|
| (i) ರಾಜ್ಯದ ಪ್ರಾಮುಖ್ಯತೆಯ ಪ್ರಸ್ತುತದ ಘಟನೆಗಳು ಮತ್ತು ರಾಜ್ಯ ಸರ್ಕಾರದ ಪ್ರಮುಖ ಯೋಜನೆಗಳು.<br>(ii) ಸಾಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಪರಿಸರ ವಿಜ್ಞಾನ- ವಿಷಯದಲ್ಲಿ ಪ್ರಾವೀಣ್ಯತೆ ಬೇಕಾಗಿಲ್ಲದೆ ಆರೋಗ್ಯ, ಪರಿಸರ ವಿಜ್ಞಾನ, ಜೈವಿಕ ವೈವಿಧ್ಯತೆ ಮತ್ತು ಹವಾಮಾನದಲ್ಲಿ ಬದಲಾವಣೆಗಳು ಇವುಗಳನ್ನೊಳಗೊಂಡಂತೆ ಯಾವುದೇ ವಿಜ್ಞಾನ ವಿಷಯವನ್ನು ವಿಶೇಷವಾಗಿ ಅಧ್ಯಯನ ಮಾಡದಿರುವ ಒಬ್ಬ ಸುಶಿಕ್ಷಿತ ವ್ಯಕ್ತಿಯಿಂದ ನಿರೀಕ್ಷೆ ಮಾಡುವಂತೆ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ದೈನಂದಿನ ಅನುಭವಗಳು/ ಅವಲೋಕನೆಗಳು/ ಪರಿಣಾಮಗಳು ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಮಕಾಲೀನ ಬೆಳವಣಿಗೆಗಳು.<br>(iii) ಸಾಮಾನ್ಯ ಮನೋ ಸಾಮರ್ಥ್ಯ- ಮನೋಶಕ್ತಿ, ಗ್ರಹಿಸುವಿಕೆ, ತಾರ್ಕಿಕ ಪ್ರತಿಪಾದನೆ ಮತ್ತು ವಿಶ್ಲೇಷಣಾ ಸಾಮರ್ಥ್ಯ, ನಿರ್ಧಾರ ತೆಗೆದುಕೊಳ್ಳುವಿಕೆ, ಸಮಸ್ಯೆ ಬಿಡಿಸುವಿಕೆ, ಮೂಲ ಗಣಿತ ಜ್ಞಾನ (ಸಂಖ್ಯೆಗಳು ಮತ್ತು ಅವುಗಳ ಸಂಬಂಧಗಳು, ಅವುಗಳ ಪರಿಮಾಣ ಇತ್ಯಾದಿ) ಮತ್ತು ದತ್ತಾಂಶದ ವ್ಯಾಖ್ಯಾನ (ನಕ್ಷೆಗಳು, ರೇಖಾಚಿತ್ರಗಳು, ಕೋಷ್ಟಕಗಳು, ದತ್ತಾಂಶ ದಕ್ಷತೆ, ಇತ್ಯಾದಿ( ಹತ್ತನೇ ತರಗತಿ / ಎಸ್.ಎಸ್.ಎಲ್.ಸಿ ಪರೀಕ್ಷೆ ಮಟ್ಟದಲ್ಲಿ). | (i) Current events of State importance and important State Government programmes.<br>(ii) General Science & Technology, Environment & Ecology-contemporary developments in science and technology and their implications including matters of everyday observations and experience, as may be expected of a well educated person who has not made a special study of any scientific discipline general issues on Health, environmental ecology, biodiversity and climate change that do not require subject specialization.<br>(iii) General Mental Ability,- Comprehension, Logical reasoning and Analytical ability, Decision making, problem solving, Basic innumeracy (numbers and their relations, order of magnitude etc.,) and data interpretation (charts, graphs, tables, data sufficiency etc., (class X/SSLC level)". |

10.3 ಮುಖ್ಯ ಪರೀಕ್ಷೆ:- ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) (11ನೇ ತಿದ್ದುಪಡಿ) ನಿಯಮಗಳು, 2014 ರಂತೆ ಮುಖ್ಯ ಪರೀಕ್ಷೆಯು ಲಿಖಿತ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆಯನ್ನು ಒಳಗೊಂಡಿರುತ್ತದೆ./ .As per Karnataka Recruitment of Gazetted Probationers (Appointment by Competitive Examinations) (11th Amendment) Rules, 2014, the Main Examination shall consist of written examination and personality test ".

<u>ಲಿಖಿತ ಪರೀಕ್ಷೆ/ Written Examination:-</u>

| ಪತ್ರಿಕೆಗಳು/Papers | | ವಿಷಯ/Subject | ಅಂಕಗಳು/ marks | ಅವಧಿ Duration (ಗಂಟೆಗಳು/ hours) |
|---|---|---|---|---|
| ಅರ್ಹತಾದಾಯಕ ಪತ್ರಿಕೆಗಳು/ Qualifying Papers | | ಕನ್ನಡ / Kannada | 150 | 2 |
| | | ಇಂಗ್ಲೀಷ್ /English | 150 | 2 |
| ಕಡ್ಡಾಯ ಪತ್ರಿಕೆಗಳು / **Compulsory Papers** | ಪತ್ರಿಕೆ -1/ Paper-1 | ಪ್ರಬಂಧ /Essay | 250 | 3 |
| | ಪತ್ರಿಕೆ -2 / Paper -2 | ಸಾಮಾನ್ಯ ಅಧ್ಯಯನ /General Studies -1 | 250 | 3 |
| | ಪತ್ರಿಕೆ -3 / Paper -3 | ಸಾಮಾನ್ಯ ಅಧ್ಯಯನ/General Studies -2 | 250 | 3 |
| | ಪತ್ರಿಕೆ -4 / Paper -4 | ಸಾಮಾನ್ಯ ಅಧ್ಯಯನ /General Studies -3 | 250 | 3 |
| | ಪತ್ರಿಕೆ -5 / Paper -5 | ಸಾಮಾನ್ಯ ಅಧ್ಯಯನ/General Studies -4 | 250 | 3 |
| | ಪತ್ರಿಕೆ-6 / Paper -6 | ಐಚ್ಛಿಕ ವಿಷಯ ಪತ್ರಿಕೆ -1/ Optional subject Paper-1 | 250 | 3 |
| | ಪತ್ರಿಕೆ -7/ Paper -7 | ಐಚ್ಛಿಕ ವಿಷಯ ಪತ್ರಿಕೆ -2/ Optional subject Paper-2 | 250 | 3 |
| ಲಿಖಿತ ಪರೀಕ್ಷೆಯ ಒಟ್ಟು ಅಂಕಗಳು /Total marks for the written examination | | | 1750 | |

<u>ಐಚ್ಛಿಕ ವಿಷಯಗಳು</u> :- ಅಭ್ಯರ್ಥಿಗಳು ಈ ಕೆಳಕಂಡ ಐಚ್ಛಿಕ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. ಪ್ರತಿ ಐಚ್ಛಿಕ ವಿಷಯವು ಎರಡು ಪತ್ರಿಕೆಗಳನ್ನು ಒಳಗೊಂಡಿರುತ್ತದೆ.ಅಭ್ಯರ್ಥಿಗಳಿಗೆ ಯಾವುದೇ ಸಂದರ್ಭದಲ್ಲಿಯೂ ಮುಖ್ಯ ಪರೀಕ್ಷೆಯ ಅರ್ಜಿಯಲ್ಲಿ ಕೋರಿರುವ ಐಚ್ಛಿಕ ವಿಷಯವನ್ನು ಬದಲಾವಣೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

| ಸಮೂಹ-1: ಐಚ್ಛಿಕ ವಿಷಯಗಳು/ Group 1: Optional Subjects | | ಸಂಕೇತ ಸಂಖ್ಯೆ / Code number |
|---|---|---|
| ಕೃಷಿ, ಕೃಷಿ ಮಾರುಕಟ್ಟೆ, ರೇಷ್ಮೆ ಮತ್ತು ಸಹಕಾರ | Agriculture, Agriculture Marketing, Sericulture and Cooperation | 01 |
| ಪಶು ಸಂಗೋಪನೆ, ಪಶುವೈದ್ಯ ವಿಜ್ಞಾನ ಮತ್ತು ಮೀನುಗಾರಿಕೆ | Animal Husbandry, Veterinary Sciences and Fisheries | 02 |
| ಮಾನವಶಾಸ್ತ್ರ | Anthropology | 03 |
| ಸಸ್ಯಶಾಸ್ತ್ರ | Botany | 04 |
| ರಸಾಯನಶಾಸ್ತ್ರ | Chemistry | 05 |
| ಸಿವಿಲ್ ಇಂಜಿನಿಯರಿಂಗ್ | Civil Engineering | 06 |
| ವಾಣಿಜ್ಯ ಮತ್ತು ಲೆಕ್ಕಶಾಸ್ತ್ರ | Commerce and Accountancy | 07 |
| ಅರ್ಥಶಾಸ್ತ್ರ | Economics | 08 |
| ಎಲೆಕ್ಟ್ರಿಕಲ್ ಇಂಜಿನಿಯರಿಂಗ್ | Electrical Engineering | 09 |
| ಭೂಗೋಳಶಾಸ್ತ್ರ | Geography | 10 |
| ಭೂವಿಜ್ಞಾನ | Geology | 11 |
| ಇತಿಹಾಸ | History | 12 |
| ಕಾನೂನು | Law | 13 |
| ಮ್ಯಾನೇಜ್ ಮೆಂಟ್ | Management | 14 |
| ಗಣಿತಶಾಸ್ತ್ರ | Mathematics | 15 |
| ಮೆಕ್ಯಾನಿಕಲ್ ಇಂಜಿನಿಯರಿಂಗ್ | Mechanical Engineering | 16 |
| ತತ್ವಶಾಸ್ತ್ರ | Philosophy | 17 |
| ಭೌತಶಾಸ್ತ್ರ | Physics | 18 |
| ರಾಜ್ಯಶಾಸ್ತ್ರ ಮತ್ತು ಅಂತರರಾಷ್ಟ್ರೀಯ ಸಂಬಂಧಗಳು | Political Science and International Relations | 19 |
| ಮನೋವಿಜ್ಞಾನ | Psychology | 20 |
| ಸಾರ್ವಜನಿಕ ಆಡಳಿತ | Public Administration | 21 |
| ಸಮಾಜಶಾಸ್ತ್ರ | Sociology | 22 |
| ಸಂಖ್ಯಾಶಾಸ್ತ್ರ | Statistics | 23 |
| ಪ್ರಾಣಿಶಾಸ್ತ್ರ | Zoology | 24 |
| ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರ | Rural Development and Co-operation | 25 |

| ಸಮೂಹ:2ರ ಭಾಷಾ ಸಾಹಿತ್ಯಿಕ ಪತ್ರಿಕೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು /Group 2: Literature of any one of the following Languages | | |
|---|---|---|
| ಇಂಗ್ಲೀಷ್ | English | 26 (a) |
| ಹಿಂದಿ | Hindi | 26 (b) |
| ಕನ್ನಡ | Kannada | 26 (c) |
| ಉರ್ದು | Urdu | 26 (d) |

| ಟಿಪ್ಪಣಿ: | Note: |
|---|---|
| (1) ಕಡ್ಡಾಯ ಕನ್ನಡ ಮತ್ತು ಇಂಗ್ಲೀಷ್ ಪತ್ರಿಕೆಗಳಲ್ಲಿ ಪಡೆದ ಅಂಕಗಳು ಅರ್ಹತಾದಾಯಕ ಸ್ವರೂಪದ್ದಾಗಿರುತ್ತವೆ. ಅರ್ಹತೆ ಪಡೆಯಲು ಈ ಪ್ರತಿಯೊಂದು ಪತ್ರಿಕೆಯಲ್ಲಿ ಕನಿಷ್ಠ ಶೇಕಡ 35 (52.5) ಅಂಕಗಳನ್ನು ನಿಗದಿಪಡಿಸಲಾಗಿದೆ. ಈ ಎರಡೂ ಪತ್ರಿಕೆಗಳಲ್ಲಿ ಗಳಿಸಿದ ಅಂಕಗಳನ್ನು ಅಭ್ಯರ್ಥಿಗಳ ಆಯ್ಕೆಯ ಅರ್ಹತೆಯನ್ನು ನಿಗದಿಪಡಿಸುವಲ್ಲಿ ಪರಿಗಣಿಸಲಾಗುವುದಿಲ್ಲ. ಈ ಎರಡು ಪತ್ರಿಕೆಗಳಲ್ಲಿ ನಿಗದಿತ ಅಂಕಗಳನ್ನು ಗಳಿಸದ ಅಭ್ಯರ್ಥಿಗಳು ಇತರೆ ಪತ್ರಿಕೆಗಳಲ್ಲಿ ಎಷ್ಟೇ ಹೆಚ್ಚು ಅಂಕಗಳನ್ನು ಗಳಿಸಿದ್ದರೂ ವ್ಯಕ್ತಿತ್ವ ಪರೀಕ್ಷೆಗೆ ಮತ್ತು ಆಯ್ಕೆಗೆ ಅರ್ಹರಾಗುವುದಿಲ್ಲ ಹಾಗೂ ಇಂತಹ ಅಭ್ಯರ್ಥಿಗಳ ಇತರೆ ವಿಷಯಗಳಲ್ಲಿ ಪಡೆದ ಅಂಕಗಳನ್ನು ಪ್ರಕಟಿಸುವುದಿಲ್ಲ. | (1)The marks obtained in qualifying papers i.e., in Kannada and in English shall be of qualifying nature. For qualifying in these papers, a minimum of 35% (52.5) marks in each paper is prescribed. The marks obtained in these two papers shall not be considered for determining the merit for selection. Candidates who do not secure the prescribed minimum marks in the qualifying papers, namely, Kannada and English, shall not be eligible for personality test and selection. |
| (2) ಮುಖ್ಯ ಪರೀಕ್ಷೆಯು ವಿವರಣಾತ್ಮಕ ಮಾದರಿಯಲ್ಲಿರುತ್ತದೆ ಮತ್ತು ಎಲ್ಲಾ ಪತ್ರಿಕೆಗಳು ಕಡ್ಡಾಯವಾಗಿರುತ್ತವೆ. | (2) The Examination shall be of conventional, Descriptive type in nature and all papers are compulsory |
| (3) ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳೆರಡರಲ್ಲೂ ಮುದ್ರಿಸಲಾಗಿರುತ್ತದೆ. ಅಭ್ಯರ್ಥಿಗಳು ಪತ್ರಿಕೆಯ ಉತ್ತರಗಳನ್ನು ಸಂಪೂರ್ಣವಾಗಿ ಕನ್ನಡ ಅಥವಾ ಆಂಗ್ಲಭಾಷಾ ಮಾಧ್ಯಮದಲ್ಲಿಯೇ ಉತ್ತರಿಸತಕ್ಕದ್ದು ( ಅರ್ಹತಾದಾಯಕ ಪತ್ರಿಕೆಗಳು ಮತ್ತು ಸಮೂಹ 2 ರಲ್ಲಿನ ಐಚ್ಛಿಕ ವಿಷಯಗಳ ಪತ್ರಿಕೆಗಳನ್ನು ಹೊರತುಪಡಿಸಿ). | (3) The question papers shall be set both in Kannada and in English. A candidate may answer a paper either entirely in Kannada or in English.(Except qualifying papers and Group 2 optional subject papers) |
| | |

| | |
|---|---|
| (4) ಮುಖ್ಯ ಪರೀಕ್ಷೆಯ ಕಡ್ಡಾಯ ಕನ್ನಡ ಹಾಗೂ ಕಡ್ಡಾಯ ಆಂಗ್ಲಭಾಷೆ ಪತ್ರಿಕೆಗಳನ್ನು ಹೊರತುಪಡಿಸಿ ಉಳಿದ ಪತ್ರಿಕೆಗಳು ಪದವಿ ಮಟ್ಟದ್ದಾಗಿರುತ್ತದೆ. ಕಡ್ಡಾಯ ಕನ್ನಡ ಹಾಗೂ ಕಡ್ಡಾಯ ಆಂಗ್ಲಭಾಷೆ ಪತ್ರಿಕೆಗಳು ಎಸ್.ಎಸ್.ಎಲ್.ಸಿಯ ಪ್ರಥಮ ಭಾಷೆಯ ಮಟ್ಟದ್ದಾಗಿರುತ್ತದೆ | (4)The standard of the Main Examination except Qualifying Kannada paper and Qualifying English paper shall be that of Degree level. The standard of qualifying Kannada paper and qualifying English paper shall be that of First Language Kannada and First Language English respectively at SSLC level. |
| (5) ಎಲ್ಲಾ 07 ಪತ್ರಿಕೆಗಳು ಕಡ್ಡಾಯ ಪತ್ರಿಕೆಗಳಾಗಿರುತ್ತವೆ. ಪತ್ರಿಕೆ-(02) ರಿಂದ (05)ರವರೆಗಿನ ಪತ್ರಿಕೆಗಳು ಮೂರು ಭಾಗಗಳನ್ನು ಒಳಗೊಂಡಿರುತ್ತದೆ. ಪ್ರತಿ ಪತ್ರಿಕೆಯು ಗರಿಷ್ಠ 250 ಅಂಕಗಳನ್ನು ಒಳಗೊಂಡಿರುತ್ತದೆ ಮತ್ತು 03 ಗಂಟೆಗಳ ಅವಧಿಯದ್ದಾಗಿರುತ್ತದೆ. | (5) All seven papers are compulsory. Paper II to V consists of three sections. Each paper carries a maximum of 250 marks and duration of three hours only. |
| (6) ಲಿಖಿತ ಮತ್ತು ವ್ಯಕ್ತಿತ್ವ ಪರೀಕ್ಷೆಯ ಅಂಕಗಳನ್ನು ಅಂತಿಮ ಆಯ್ಕೆ ಪಟ್ಟಿಯೊಂದಿಗೆ ಪ್ರಕಟಿಸಲಾಗುವುದು. | (6)Written and Personality Test Marks will be announced along with the final select list |
| (7) ಮುಖ್ಯ ಪರೀಕ್ಷೆಯ ಪಠ್ಯಕ್ರಮವನ್ನು ಆಯೋಗದ ವೆಬ್‌ಸೈಟ್ http:// kpsc. kar.nic.in/Syllabus" ನಲ್ಲಿ ಬಿತ್ತರಿಸಲಾಗಿದೆ. | (7) The syllabi for the main examination is published in Commission's web site "http://kpsc.kar.nic.in/Syllabus |

ಪ್ರಮುಖ ಸೂಚನೆ:

(1) ಮುಖ್ಯ ಪರೀಕ್ಷೆಯ ಐಚ್ಛಿಕ ವಿಷಯಗಳ ಪತ್ರಿಕೆಗಳ ಬಗ್ಗೆ ಸರ್ಕಾರದ ನಿಯಮಗಳಲ್ಲಿ ಏನಾದರೂ ಬದಲಾವಣೆಗಳಾದ್ದಲ್ಲಿ ನಂತರ ಪ್ರಕಟಿಸಲಾಗುವುದು.

(2) ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು digital ಮೌಲ್ಯಮಾಪನ ಮಾಡಲಾಗುವುದು. ಮರು ಮೌಲ್ಯಮಾಪನ ಹಾಗೂ ಮರು ಎಣಿಕೆಗೆ ನಿಯಮಗಳಲ್ಲಿ ಆಸ್ಪದವಿರುವುದಿಲ್ಲ

10.4 ವ್ಯಕ್ತಿತ್ವಪರೀಕ್ಷೆ:–ವ್ಯಕ್ತಿತ್ವ ಪರೀಕ್ಷೆಯು ಅಭ್ಯರ್ಥಿಗಳ ವೈಯಕ್ತಿಕ ಗುಣಮಟ್ಟ ಮತ್ತು ಸಿವಿಲ್ ಸೇವೆಗಳಿಗೆ ಸೂಕ್ತರೇ ಎಂಬ ಬಗ್ಗೆ ಅಂದರೆ ನಾಯಕತ್ವದ ಗುಣ, ತೀರ್ಮಾನ ತೆಗೆದುಕೊಳ್ಳುವ ವಿವಿಧ ಮತ್ತು ಆಳವಾದ ಆಸಕ್ತಿ, ಒಂದು ಗುಂಪಿನಲ್ಲಿ ಕೆಲಸ ಮಾಡುವ ಸಾಮರ್ಥ್ಯ ಮತ್ತು ಪ್ರೇರಣಾಕೌಶಲ್ಯ ಹಾಗೂ ತಾರ್ಕಿಕ ಯೋಚನಾ ಸಾಮರ್ಥ್ಯಗಳ ಬಗ್ಗೆ ನಿರ್ಧರಿಸುತ್ತದೆ.

ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇಮಕಾತಿ) (ತಿದ್ದುಪಡಿ) ನಿಯಮಗಳು **2019**ರಂತೆ ಆಯೋಗವು ಗ್ರೂಪ್–'ಎ' ಮತ್ತು 'ಬಿ' ಸೇವೆಗಳ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ **1:3**ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಕರೆಯಲಾಗುವುದು. ಆಯೋಗವು, ಅಭ್ಯರ್ಥಿಗಳು ಮುಖ್ಯ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಜೇಷ್ಠತೆ (merit) ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿಯನ್ವಯ ಲಭ್ಯವಿರುವ ಹುದ್ದೆಗಳಲ್ಲಿ ಪರಿಶಿಷ್ಠಜಾತಿ, ಪರಿಶಿಷ್ಠಪಂಗಡ, ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗನುಗುಣವಾಗಿ ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಕರೆಯಲಾಗುವುದು. ವ್ಯಕ್ತಿತ್ವ ಪರೀಕ್ಷೆಯು ಗರಿಷ್ಠ 200 ಅಂಕಗಳನ್ನುಒಳಗೊಂಡಿರುತ್ತದೆ.